# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 29-11-2022

### ಬೀದರ ನೂತನ ನಗರ ಠಾಣೆ ಅಪರಾಧ ಸಂಖ್ಯೆ 212/2022 ಕಲಂ 379 ಐಪಿಸಿ :-

ದಿನಾಂಕ 28/11/2022 ರಂದು 1915 ಗಂಟೆಗೆ ಫಿರ್ಯಾದಿ ಶ್ರೀಮತಿ ಚಂದ್ರಿಕಾ ಗಂಡ ಸಾಗರ ವಯ:23 ವರ್ಷ ಜಾತಿ:ಬ್ರಾಹ್ಮಣ ಉ:ಮನೆಗೆಲಸ ಸಾ/ಶಂಕರಪಲ್ಲಿ ಮಂಡಲ ಶಂಕರಪಲ್ಲಿ ಜಿಲ್ಲಾ/ರಂಗಾರೆಡ್ಡಿ ತೆಲಂಗಾಣ ರಾಜ್ಯ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ 26/11/2022 ರಂದು ಬೀದರ ನಗರದ ನೆಹರು ಕ್ರಿಡಾಂಗಣ ಹತ್ತೀರ ಇರುವ ಸಾಯಿ ಪುಸ್ಪಾಂಜಲಿ ಫಂಕ್ಷನ ಹಾಲನಲ್ಲಿಯ ಸಂಬAಧಿಕರ ತೊಟ್ಟಿಲು ಕಾರ್ಯಕ್ರಮವಿದ್ದ ಕಾರಣ ಬೀದರಕ್ಕೆ ಬಂದು ಫಂಕ್ಷನ ಹಾಲಿನ ಡ್ರೆಸಿಂಗ ರೂಮಿನಲ್ಲಿ ತನ್ನ ವ್ಯಾನಿಟಿ ಬ್ಯಾಗ ಇಟ್ಟು, 2:00 ಪಿ.ಎಮ್. ಗಂಟೆಯ ಸುಮಾರಿಗೆ ಮನೆಯಲ್ಲಿ ಇದ್ದ ಮದುವೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಸಂಬAಧಿಕರಿಗೆ ಕೊಡಲು ಡ್ರೆಸಿಂಗ ರೂಮಿನಿಂದ ಹೊರಗೆ ಹೋಗಿದ್ದು, ಮರಳಿ ಡ್ರೆಸಿಂಗ ರೂಮಿನಲ್ಲಿ ಹೋಗಿ ನೋಡಿದಾಗ ವ್ಯಾನಿಟಿ ಬ್ಯಾಗಿನ ಚೈನ ತೆರೆದಿದ್ದು, ಬ್ಯಾಗಿನಲ್ಲಿ ಇದ್ದ 1) 30 ಗ್ರಾಂ.ತೂಕದ ಬಂಗಾರದ ನೆಕ್ಲೆಸ್ ಅ.ಕಿ.1,50,000/-ರೂ. ನನ್ನ ಗಂಡರವರ 2)20 ಗ್ರಾಂ. ತೂಕದ ಬಂಗಾರದ ಬ್ರಾಸ್ಲೆಟ ಅ.ಕಿ.1,00,000/-ರೂ. 3)20 ಗ್ರಾಂ. ತೂಕದ ಬಂಗಾರದ ಸುತಳಿ ಚೈನ ಅ.ಕಿ.1,00,000/-ರೂ. 4)6 ಗ್ರಾಂ. ತೂಕದ ಬಂಗಾರದ ಉಂಗುರ ಅ.ಕಿ. 30,000/-ರೂ. ನನ್ನ ಬ್ಯಾಗಿನಲ್ಲಿ ಇರಲಿಲ್ಲ. ಹೀಗೆ ಒಟ್ಟು 76 ಗ್ರಾಂ. ತೂಕದ ಬಂಗಾರದ ಆಭರಣಗಳನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 76/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 28/11/2022 ರಂದು ರಾತ್ರಿ 8 ಗಂಟೆಗೆ ಪಿಎಸ಼್ಐ ರವರು ಠಾಣೆಯಲ್ಲಿದ್ದಾಗ ಅಯಾಸಪೂರ ಕ್ರಾಸ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟ್ಕಾ ಚೀಟಿ ಬರೆದುಕೊಳ್ಳುತಿದ್ದಾನೆ ಅಂತಾ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಅಯಾಸಪೂರ ಕ್ರಾಸ ಹತ್ತಿರ ಹೋಗಿ ನೋಡಲಾಗಿ ಅಲ್ಲಿ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಗೆ ಮಟ್ಕಾ ನಸೀಬಿನ ಜೂಜಾಟ 01 ರೂ. ಗೆ 80 ಅಂತಲೂ ಮತ್ತು 10 ರೂ.ಗೆ 800 ರೂ. ಅಂತಾ ಹೇಳುತ್ತಾ ಸಾರ್ವಜನಿಕರಿಂದ ದುಡ್ಡು ಪಡೆದುಕೊಳ್ಳುತ್ತಾ ಅವರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ರಾತ್ರಿ 9.30 ಗಂಟೆಗೆ ಒಮ್ಮೆಲೆ ಅವನ ಮೇಲೆ ದಾಳಿ ಮಾಡುವಾಗ ಸಾರ್ವಜನಿಕರು ಓಡಿ ಹೋಗಿದ್ದು ಮತ್ತು ಮಟಕಾ ಚೀಟಿ ಬರೆದುಕೊಳ್ಳುತಿದ್ದವನಿಗೆ ಅಲ್ಲೆ ಹಿಡಿದು ಹೆಸರು ವಿಳಾಸ ವಿಚಾರಿಸಲಾಗಿ ಅವನು ತನ್ನ ಹೆಸರು ಧನರಾಜ ತಂದೆ ಮಲ್ಲಿಕಾರ್ಜುನ ಶಿವಣಿ ವಯ- 25 ಜಾ|| ಗೊಂಡ್ ಉ|| ಒಕ್ಕಲುತನ ಸಾ|| ಕಮಠಾಣಾ ತಾ|| ಜಿ|| ಬೀದರ ಅಂತ ತಿಳಿಸಿರುತ್ತಾನೆ. ನಂತರ ಆತನ ಅಂಗ ಝುಡ್ತಿ ಮಾಡಲಾಗಿ ಅವನ ಹತ್ತಿರ 500/-ರೂಪಾಯಿಯ 1 ನೋಟು ಮತ್ತು 100/- ರೂಪಾಯಿಯ 3 ನೋಟು ಮತ್ತು 10 ರೂಪಾಯಿಯ 3 ನೋಟು ಒಟ್ಟು ರೂ. 830/--ನಗದು ಹಣ ಇದ್ದು ಮತ್ತು 1 ಮಟ್ಕಾ ಚೀಟಿ ಹಾಗೂ ಒಂದು ಬಾಲ್ ಪೆನ್ ಸಿಕ್ಕಿರುತ್ತವೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 141/2022 ಕಲಂ 279, 304(ಎ) ಐಪಿಸಿ :-

ದಿನಾಂಕ:28/11/2022 ರಂದು 22.30 ಗಂಟೆಗೆ ಬಂದು ಸದರಿ ಫಿರ್ಯಾದಿ ನಜೀರ ಅಹ್ಮದ ರವರು ನೀಡಿದ ಹೇಳಿಕೆ ಸಾರಾಂಶವೇನೆಂದರೆ ದಿ: 28/11/2022 ರಂದು ಸಾಯಂಕಾಲ 04:00 ಗಂಟೆಯ ಸುಮಾರಿಗೆ ಇವರ ತಂದೆ ನಸೀರ ಅಹ್ಮದ ರವರು ಹೊಂಡಾ ಎಕ್ಟಿವಾ ಮೋಟಾರ ಸೈಕಲ

ನಂ:ಟಿ,ಎಸ್-09,ಎಫ್,ಎಕ್ಸ-7907 ನೇದ್ದರ ಮೇಲೆ ಹೈದ್ರಾಬಾದದಿಂದ ಕಲಬುರ್ಗಿಗೆ ಹೋಗುವಾಗ ಹುಮನಾಬಾದ ಕಡೆಯಿಂದ ಹೊಂಡಾ ಎಕ್ಟೀವಾ ಮೋಟಾರ ಸೈಕಲ ನಂ:ಟಿ,ಎಸ್-09,ಎಫ್,ಎಕ್ಸ-7907 ನೇದ್ದರ ಮೇಲೆ ಬರುತ್ತಿರುವಾಗ ರಾ,ಹೆ,50 ಹಳ್ಳಿಖೇಡ(ಕೆ) ಗ್ರಾಮದ ಶಿವ ಮಂದಿರ ಹತ್ತಿರ ಮೋಟರ ಸೈಕಲನ್ನು ಜೋರಾಗಿ ಮತ್ತು ಬೇಜವಾಬ್ದಾರಿಯಿಂದ ಚಲಾಯಿಸಿ ರೋಡಿನ ಮೇಲೆ ಇರುವ ಬ್ರೇಕರಕ್ಕೆ ಮೋಟರ ಸೈಕಲನ್ನು ನಿಯಂತ್ರಣ ತಪ್ಪಿ ಅಪಘಾತ ಪಡಿಸಿದ್ದು ಅಪಘಾತದಿಂದ ಬಲಗಡೆ ತಲೆಗೆ ಭಾರಿ ರಕ್ತಗಾಯವಾಗಿ ಮೂಗಿನಿಂದ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಔರಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 148/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ:27/11/2022 ರಂದು 2300 ಗಂಟೆಗೆ ಔರಾದ ಪಟ್ಟಣದ ಸಂತೋಷ ಕೋಳಿ ರವರ ಮನೆಯಲ್ಲಿ ಕೆಲವು ಜನರು ಸೇರಿ ಆಕ್ರಮ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಎಂದು ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ನೋಡಲು ಮನೆಯ ಪಡಸಾಲೆಯಲ್ಲಿ ಜನರು ಜನರು ಗುಂಪು ಕಟ್ಟಿಕೊಂಡು ಗೊಲಾಗಿ ಕುಳಿತು ಇಸ್ಪೇಟ ಎಲೆಗಳಿಂದ ಹಣ ಹಚ್ಚಿ ಪಣ ತೊಟ್ಟು ಅಂದರ ಬಾಹರ ಅನ್ನುವ ಜೂಜಾಟ ಅಡುತಿದ್ದರು ಅದನ್ನು ನೋಡಿ ಖಚೀತ ಪಡಿಸಿಕೊಂಡು, ಸದರಿ ಜೂಜಾಟ ಅಡುತಿದ್ದ ಜನರು ಸ್ಥಳದಿಂದ ಓಡಿ ಹೋಗುವ ಸಂಭವ ಕಂಡು ಬಂದಿರುವದರಿAದ ಸಿಬ್ಬಂದಿ ಜನರು ಹಾಗು ಪಂಚರ ಸಮಕ್ಷಮ ಸದರಿ ಜನರ ಮೇಲೆ ದಿನಾಂಕ: 28/11/2022 ರಂದು 02:15 ಗಂಟೆಗೆ ಸಿಬ್ಬಂದಿ ಜನರ ಸಹಾಯದಿಂದ ದಾಳಿ ಮಾಡಿ ಹಿಡಿದು ಅವರಿಗೆ ಹೆಸರು ವಿಳಾಸ ವಿಚಾರಣೆ ಮಾಡುವಾಗ ಅಲ್ಲಿಂದ 4 ಜನರು ಓಡಿಹೋದರು ಉಳಿದವರಿಗೆ ಹಿಡಿದು ಅವರ ಅಂಗ ಪರಿಶಿಲಿಸಿದಾಗ 1] ನಸಿಂಮಲು ತಂದೆ ಗುಂಡಯ್ಯಾ ಸಿಖರಖಾನಾ ವಯ 40 ವರ್ಷ ಜಾತಿ,ಮೋದರಾಜ್ ಉದ್ಯೋಗ, ಹೋಟಲ್ ಕೆಲಸ ಸಾ, ನಾಗನಪಲ್ಲಿ ತಾ, ನಾರಾಯಣಖೇಡ ಇವರ ಹತ್ತಿರ 25000/-ರೂಗಳು 2) ಭೋಜಿರಾಮ ತಂದೆ ಪೋಮಾನಾಯಕ ರಾಠೋಡ ವಯ 30 ವರ್ಷ ಜಾತಿ, ಲಮಾಣಿ ಉದ್ಯೋಗ,ಕೂಲಿ ಕೆಲಸ ಸಾ, ನಾಗನಪಲ್ಲಿ ತಾ, ನಾರಾಯಣಖೇಡ ಇತನ ಹತ್ತಿರ 9000/-ರೂಗಳು 3] ಕೃಷ್ಣಾ ತಂದೆ ನರಸಯ್ಯಾ ಪಿಟ್ಲೆ ವಯ 38 ವರ್ಷ ಜಾತಿ, ಮೋದರಾಜ ಉದ್ಯೋಗ, ಒಕ್ಕಲುತನ ಸಾ, ಗಂಡಿಪೇಟ್ ತಾ, ಎಲ್ಲಾರೆಡ್ಡಿ ಇತನ ಇತನ ಹತ್ತಿರ 11000/- ರೂಗಳು 4) ರವಿ ತಂದೆ ಈರಯ್ಯಾ ವಯ 48 ವರ್ಷ ಜಾತಿ, ಮುನ್ನರಕಪ್ ಉದ್ಯೋಗ, ಒಕ್ಕಲುತನ ಸಾ, ಗಂಡಿಪೇಟ್ ಇತನ ಹತ್ತಿರ 30,000/-ರೂಗಳು 5] ಅತೀಕ ತಂದೆ ಯುಸುಫ ವಯ 27 ವರ್ಷ ಜಾತಿ, ಮುಸ್ಲಿಂ ಉದ್ಯೋಗ, ಕೂಲಿ ಕೆಲಸ ಸಾ, ಸಾ, ಗಂಡಿಪೇಟ್ ಇತನ ಹತ್ತಿರ 8000/- ರೂಗಳು 6] ನವನಾಥ ತಂದೆ ಸಂಜುರಾವ ಬಕ್ಕಾಜಿ ವಯ 24 ವರ್ಷ ಜಾತಿ,ಮರಾಠಾ ಉದ್ಯೋಗ, ವ್ಯಾಪಾರ ಸಾ, ರಾಸೋಲ್ ಮಂಡಲ್ ಕಂಗಟಿ ಇತನ ಹತ್ತಿರ 12000/- ರೂಗಳು 7] ಮೋಹನ ತಂದೆ ಬಾಲಯ್ಯಾ ಪೆದ್ದೆ ವಯ 24 ವರ್ಷ ಜಾತಿ, ಮೋದರಾಜ ಉದ್ಯೋಗ, ಟ್ರಾಕ್ಟರ ಚಾಲಕ ಸಾ, ನಾಗೂರ (ಬಿ) ತಾ, ನಾರಾಯಣಖೇಡ್ ಇತನ ಹತ್ತಿರ 17000/- ರೂಗಳು 8) ಲಕ್ಷ್ಮಣ ತಂದೆ ಹಣಮಯ್ಯಾ ಸಂತಾಪೂರ ವಯ 33 ವರ್ಷ ಜಾತಿ , ಮೋದರಾಜ್ ಉದ್ಯೋಗ, ಒಕ್ಕಲುತನ ಸಾ, ಗಣೇಶಪೂರ (ಎ) ಮಂಡಲ್ ಕಂಗಟಿ ಇತನ ಹತ್ತಿರ 14000/- ರೂಗಳು 9) ಶಿವಾಜಿರಾವ ತಂದೆ ರಾಮಚಂದ್ರರಾವ ಪಾಟೀಲ್ ವಯ 47 ವರ್ಷ ಜಾತಿ ಮರಾಠಾ ಉದ್ಯೋಗ,ಒಕ್ಕಲುತನ ಸಾ, ನಾಗನಪಲ್ಲಿ ತಾ, ನಾರಾಯಣಖೇಡ ಇತನ ಹತ್ತಿರ 22,000/- ರೂಗಳು 10) ಕೇಶವ ತಂದೆ ಸುರ್ಯಕಾಂತ ವಯ 24 ವರ್ಷ ಜಾತಿ, ಹಟಕರ್ ಉದ್ಯೋಗ, ಕೂಲಿ ಕೆಲಸ ಸಾ, ದೇಶಮುಖಗಲ್ಲಿ ಔರಾದ (ಬಿ) ಇತನ ಹತ್ತಿರ 15000/- ರೂಗಳು 11) ಮಾಹಾದೇವ ತಂದೆ ವಿಠಲರಾವ ಕೊಳಿ ವಯ 21 ವರ್ಷ ಉದ್ಯೋಗ, ಚಾಲಕ ಜಾತಿ, ಕೊಳಿ ಸಾ, ದೇಶಮುಖಗಲ್ಲಿ ಔರಾದ (ಬಿ)ಇತನ ಹತ್ತಿರ

8000/- ರೂ ಇದ್ದವು ಹಾಗು ಎಲ್ಲರ ಮಧ್ಯ 64,000/- ರೂ, ಹೀಗೆ ಒಟ್ಟು 2,35,000/- ಮತ್ತು 104 ಇಸ್ಪಿಟ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಔರಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 149/2022 ಕಲಂ 32, 34 ಕೆಇ ಕಾಯ್ದೆ :-

28/11/2022 ರಂದು 1445 ಗಂಟೆಗೆ ಪಿ.ಎಸ.ಐ ರವರು ಠಾಣೆಯಲ್ಲಿದ್ದಾಗ ಔರಾದ ಪಟ್ಟಣದ ಅಮರೇಶ್ವರ ಮಂದಿರದ ಎದುರಿಗೆ ಇರುವ ರಾಜಕುಮಾರ ಗಾದಗೆ ರವರ ಅಂಗಡಿಯ ಪಕ್ಕದಲ್ಲಿ ರಸ್ತೆಯ ಮೇಲೆ ಒಂದು ಕಾಟನದಲ್ಲಿ ಸರಾಯಿ ತೆಗೆದುಕೊಂಡು ಹೋಗುತ್ತಿದ್ದಾನೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಕಾಟನ ತೆಗೆದುಕೊಂಡು ಹೋಗುವುದನ್ನು ನೋಡಿ ಅವನ ಮೇಲೆ ದಾಳಿ ಮಾಡಿ ಹಿಡಿದು ಅವನ ಹೆಸರು ವಿಚಾರಿಸಲು 1] ಸಾಗರ@ಸಂದೀಪ ತಂದೆ ಜಗನ್ನಾಥ ಕೋಳಿ ವಯ 24 ವರ್ಷ ಜಾತಿ ಕೋಳಿ ಉದ್ಯೋಗ, ಕೂಲಿ ಕೆಲಸ ಸಾ, ದೆಶಮುಖಗಲ್ಲಿ ಔರಾದ (ಬಿ) ಅಂತ ತಿಳಿಸಿದನು ನಂತರ ಕಾಟನದಲ್ಲಿ ಏನಿದೆ ಅಂತಾ ವಿಚಾರಿಸಲು ಕಾಟನದಲ್ಲಿ ಸರಾಯಿ ಪಾಕೆಟಗಳನ್ನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದನು ಸದರಿ ಕಾಟನ ಕೆಳಗೆ ಇಳಿಸಿ ಪರಿಶೀಲಿಸಿ ನೋಡಲು ಅದರಲ್ಲಿ 1]ಒರಿಜನಲ್ ಚಾಯ್ಸ 39 ಪಾಕೇಟಗಳು 90 ಎಂ.ಎಲ್ ಉಳ್ಳÀದ್ದು ಇದ್ದು ಅವುಗಳ ಬೆಲೆ 35 ರೂಪಾಯಿ ಒಂದರAತೆ ಒಟ್ಟು 39 ಪಾಕೆಟಗಳ ಬೇಲೆ 1365/-ರೂಗಳು ಹಾಗು 2) ಓಲ್ಡ ಟವೆರನ 180 ಎಮ್ ಎಲ್ ನ 02 ಪಾಕಿಟಗಳು ಅವುಗಳ ಒಂದರAತೆ ಬೆಲೆ:86 ರೂ ಇದ್ದು ಒಟ್ಟು 02 ಪಾಕಿಟಗಳ ಬೆಲೆ 172/- ರೂ ನೇದ್ದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.